# ಖುರ್ಆನ್ ಎಂದರೇನು?

**ಸೃಷ್ಟಿಕರ್ತ ಪ್ರಭುವಿನ ಮಾತು:**

ಅಲ್‌ಖುರ್ಆನ್ ಮಹೋನ್ನತ ಪ್ರಭುವಿನ ಬರಹ ರೂಪದ ಮಾತಾಗಿದೆ. ಆ ಸರ್ವಶಕ್ತನು (ಅಲ್ಲಾಹ್ ಎಂದು ಅರೇಬಿಕ್ ಭಾಷೆಯಲ್ಲಿ ಕರೆಯಲಾಗುತ್ತದೆ) ಪ್ರವಾದಿ ಮುಹಮ್ಮದ್(ಸ)ರಿಗೆ ಮಲಕ್ ಜಿಬ್‌ರೀಲ್ ಮೂಲಕ ಅದನ್ನು ಇಳಿಸಿಕೊಟ್ಟನು.

***"ಈ ಗ್ರಂಥದ ಅವತೀರ್ಣವು ಪ್ರಚಂಡನೂ ಸುಜ್ಞಾನಿಯೂ ಆದ ಅಲ್ಲಾಹುವಿನಿಂದಾಗಿರುತ್ತದೆ."*** **(ಅಲ್‌ಕುರ್ಆನ್ 39:1)**

**ಮನುಕುಲದ ಮಾರ್ಗದರ್ಶಕ:**

ಖುರ್ಆನ್ ಎಂದರೆ ***"ಸರ್ವಜನರಿಗೆ ಮಾರ್ಗದರ್ಶನವಾಗಿಯೂ, ಸನ್ಮಾರ್ಗ ಹಾಗೂ ಸತ್ಯಾಸತ್ಯ ವಿವೇಚಕಗಳ ಸುಸ್ಪಷ್ಟ ವಿವರಣೆಯಾಗಿಯೂ ಅವತೀರ್ಣಗೊಂಡಿರುವುದಾಗಿದೆ."*** **(ಕುರ್ಆನ್ 2:185)**

ಸತ್ಯ ಮತ್ತು ಮಿಥ್ಯಗಳ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳಲು ಇದು ಸಹಾಯ ಮಾಡುತ್ತದೆ. ಈ ಅರಿವನ್ನು ಹೊರತುಪಡಿಸಿದರೆ ಖಂಡಿತ ಮನುಷ್ಯನು ನಷ್ಟದಲ್ಲಿರುತ್ತಾನೆ.

**ಅಂತಿಮ ವಾಣಿ:** ಖುರ್ಆನ್ ಸರ್ವಶಕ್ತ (ಆರಾಧ್ಯ) ಅಲ್ಲಾಹುವಿನಿಂದ ಅವತೀರ್ಣಗೊಂಡ ಕೊನೆಯ ದಿವ್ಯಗ್ರಂಥವಾಗಿದೆ. ಇದು ಗತಕಾಲದ ದಿವ್ಯ ಗ್ರಂಥಗಳಲ್ಲಿ ಉಳಿದುಬಿಟ್ಟಿರುವ ಕೆಲವು ಸತ್ಯಗಳನ್ನು ದೃಢಪಡಿಸುತ್ತದೆ. ಪ್ರಸ್ತುತ ಗ್ರಂಥಗಳಲ್ಲಿನ ಆವೃತ್ತಿಗಳಲ್ಲಿ ಇಂದಿನವರೆಗೆ ನಡೆದಿರುವಂತಹ ಕೃತಕ ಸೃಷ್ಟಿ ಮತ್ತು ಹೊಸ ಸೇರ್ಪಡೆಗಳನ್ನು ಇದು ತಿದ್ದುತ್ತದೆ ಹಾಗೂ ಅವುಗಳನ್ನು ಖಂಡಿಸುತ್ತದೆ.

***ಓ ಗ್ರಂಥದ ಜನರೇ, ನಾವು ಅವತೀರ್ಣಗೊಳಿಸಿದುದರ ಮೇಲೆ ನೀವು ವಿಶ್ವಾಸವಿಡಿರಿ; ಅದು ನಿಮ್ಮ ಬಳಿಯಿರುವುದನ್ನೂ ಸತ್ಯವೆಂದು ದೃಢಪಡಿಸುತ್ತದೆ;*** **(ಕುರ್ಆನ್ 4:47)**

**ಕುರ್ಆನ್ ಅವತೀರ್ಣಗೊಂಡಿರುವುದು ಹೇಗೆ?**

ಆದರಣೀಯ ಕುರ್ಆನ್ ಮುಹಮ್ಮದ್(ಸ)ರಿಗೆ ಅವತೀರ್ಣಗೊಂಡಿದೆ. ಅದು ಯಾವ ಭಾಷೆಯಲ್ಲಿ ಅವತೀರ್ಣಗೊಂಡಿದೆಯೋ ಅದೇ (ಅರಬಿ) ಭಾಷೆಯಲ್ಲಿ ಸುರಕ್ಷಿತವಾಗಿದೆ. ಆದರೆ ಕುರ್ಆನ್ ಭಾಷಾಂತರಗಳು ಹಲವು ಭಾಷೆಗಳಲ್ಲಿ ಲಭ್ಯವಿವೆ.

ಒಂದೇ ಸಲಕ್ಕೆ ಕುರ್ಆನ್ ಅವತೀರ್ಣಗೊಂಡದ್ದಲ್ಲ; ಬದಲು 23 ವರ್ಷಗಳ ಕಾಲಾವಧಿಯ ವರೆಗೆ ಪ್ರಸ್ತುತ ಅವತೀರ್ಣವು ದೀರ್ಘಗೊಂಡಿತ್ತು.

**ಸಂರಕ್ಷಣೆ:** ಅವತೀರ್ಣಗೊಂಡ ಕಾಲದಿಂದ ಇಂದಿನವರೆಗೆ ಅವತೀರ್ಣಗೊಂಡ ರೂಪದಲ್ಲೇ ಶುದ್ಧವಾಗಿ ಸುದೀರ್ಘ ಕಾಲದಿಂದ ಸುರಕ್ಷಿತವಾಗಿರುವ ಏಕೈಕ ಧಾರ್ಮಿಕ ಗ್ರಂಥ ಅದು ಕುರ್ಆನ್ ಮಾತ್ರವಾಗಿದೆ. ಅವತೀರ್ಣವಾದ ಕಾಲ ಅಂದರೆ ಹದಿನಾಲ್ಕು ಶತಮಾನಗಳಿಂದ ಅದಕ್ಕೆ ಯಾವುದನ್ನೂ ಸೇರಿಸಲಾಗಿಲ್ಲ, ಯಾವುದನ್ನೂ ತೆಗೆಯಲಾಗಿಲ್ಲ, ಯಾವುದನ್ನೂ ಬದಲಾವಣೆ ಮಾಡಲಾಗಿಲ್ಲ.

***ನಾವೇ ಈ ಖುರ್ಆನನ್ನು ಅವತೀರ್ಣಗೊಳಿಸಿರುತ್ತೇವೆ ಮತ್ತು ನಾವೇ ಇದರ ಸಂರಕ್ಷಕರಾಗಿರುತ್ತೇವೆ.*** **(ಕುರ್ಆನ್ 15:9)**

ಸಂರಕ್ಷಣೆಯೆಂದರೆ ಕೇವಲ ಲಿಖಿತ ರೂಪದಲ್ಲಿ ಮಾತ್ರವಲ್ಲ, ಮಕ್ಕಳ, ಸ್ತ್ರೀಯರ, ಪುರುಷರ ಹೃದಯಗಳಲ್ಲೂ ಸುರಕ್ಷಿತವಾಗಿದೆ. ಲಕ್ಷಾಂತರ ಮಂದಿ ಕುರ್ಆನ್ ಸಾದ್ಯಂತ ಹೃದಯಪಾಠ ಮಾಡಿಕೊಂಡಿದ್ದಾರೆ.

**ವೈಜ್ಞಾನಿಕ ಅದ್ಭುತಗಳು:**

ಆಧುನಿಕ ವಿಜ್ಞಾನ ಶಾಸ್ತ್ರಕ್ಕೆ ಕುರ್ಆನ್ ವಿರುದ್ಧವಾಗಿಲ್ಲ ಮಾತ್ರವಲ್ಲ, ಅದಕ್ಕೆ ಪೂರಕವಾಗಿಯೂ ಇದೆ. ಇದು ಹಲವು ವೈಜ್ಞಾನಿಕ ಕ್ಷೇತ್ರಗಳ ಉದಾಃ ಭ್ರೂಣಶಾಸ್ತ್ರ, ಉಲ್ಕಾಶಾಸ್ತ್ರ, ಖಗೋಳಶಾಸ್ತ್ರ, ಜೀವ ಶಾಸ್ತ್ರ, ಸಮುದ್ರಶಾಸ್ತ್ರ ಮುಂತಾದ ವೈಜ್ಞಾನಿಕ ವಿಭಾಗಗಳ ಸಹಜ ವಿದ್ಯಮಾನಗಳನ್ನು ವಿವರಿಸುವುದೇ ಕುರ್ಆನ್‌ನ ಅತ್ಯಂತ ಮಹತ್ವಪೂರ್ಣ ವಿಶೇಷತೆಗಳಲ್ಲೊಂದಾಗಿದೆ. ಏಳನೇ ಶತಮಾನದ ಈ ಗ್ರಂಥವು ವೈಜ್ಞಾನಿಕ ಸಂಶೋಧನೆಗಳಿಗೆ ನಿಖರವಾಗಿ ಮಾತನಾಡಿದೆ ಎಂದು ಇಂದಿನ ವಿಜ್ಞಾನಿಗಳು ಸಹ ಒಪ್ಪಿಕೊಂಡಿದ್ದಾರೆ.

***ಶೀಘ್ರವೇ ನಾವು ನಮ್ಮ ದೃಷ್ಟಾಂತಗಳನ್ನು ಬಾಹ್ಯಾಕಾಶಗಳಲ್ಲಿ ತೋರಿಸಿಕೊಡಲಿದ್ದೇವೆ ಮತ್ತು ಸ್ವತಃ ಅವರ ಅಸ್ತಿತ್ವದಲ್ಲೂ. ಎಲ್ಲಿಯವರೆಗೆಂದರೆ ಇದುವೇ ಸತ್ಯವೆಂದು ಅವರಿಗೆ ಸ್ಪಷ್ಟವಾಗುವವರೆಗೆ. ತಮ್ಮ ಪಾಲಕಪ್ರಭುವು ಪ್ರತಿಯೊಂದು ವಸ್ತುವಿನ ಅರಿವನ್ನು ಹೊಂದಿದ್ದಾನೆಂಬುದು ಅವರಿಗೆ ಸಾಕಾಗದೇನು?"*** **(ಕುರ್‌ಆನ್ 41:53)**

ವಾಸ್ತವದಲ್ಲಿ ಆಧುನಿಕ ಉಪಕರಣಗಳ ಮೂಲಕ ಇತ್ತೀಚೆಗೆ ಸಂಶೋಧಿಸಲಾದ ವೈಜ್ಞಾನಿಕ ಅದ್ಭುತಗಳು ಕುರ್‌ಆನ್‌ನಲ್ಲಿ ಹಲವೆಡೆ ಪ್ರಸ್ತಾಪಿಸಲಾಗಿವೆ. ಕೆಳಗಿನ ವಿಷಯಗಳನ್ನು ಗಮನಿಸಿರಿ:

ಕುರ್‌ಆನ್ ಮಾನವ ಭ್ರೂಣದ ಹಂತ ಹಂತದ ಬೆಳವಣಿಗೆಗಳನ್ನು ಸವಿಸ್ತಾರವಾಗಿ ಹೇಳಿದೆ. ಇತ್ತೀಚಿನ ಕಾಲದವರೆಗೆ ಇದು ವಿಜ್ಞಾನ ಜಗತ್ತಿಗೂ ಅಜ್ಞಾತವಾಗಿತ್ತು.

ಖಗೋಳ ಶಾಸ್ತ್ರದಲ್ಲಿ ಪ್ರಸ್ತಾಪಿಸಲಾಗುವ ಆಕಾಶ ಕಾಯಗಳು (ನಕ್ಷತ್ರಗಳು, ಗ್ರಹಗಳು, ಸೂರ್ಯ ಚಂದ್ರ ಇತ್ಯಾದಿಗಳು) ಎಲ್ಲವೂ ಧೂಳಿನ ಮೋಡಗಳಿಂದ ರೂಪೀಕೃತವಾಗಿವೆ ಎಂಬುದನ್ನು ಕುರ್‌ಆನ್ ಪ್ರಸ್ತಾಪಿಸಿದೆ. ಇದು ಮೊದಲು ಅಜ್ಞಾತವಾಗಿತ್ತು. ಇಂದು ಇದು ಆಧುನಿಕ ಕಾಸ್ಮೋಲಜಿಯು ಒಪ್ಪಿಕೊಂಡಂತಹ ಅವಿರೋಧ ಸತ್ಯವಾಗಿದೆ.

ಆಧುನಿಕ ವಿಜ್ಞಾನ ಶಾಸ್ತ್ರವು ಕಂಡು ಹಿಡಿದಂತಹ ಮತ್ತೊಂದು ವಾಸ್ತವವೇನೆಂದರೆ ಪರಸ್ಪರ ಸಂಧಿಸುವ ಎರಡು ಕಡಲುಗಳನ್ನು ಒಂದಕ್ಕೊಂದು ಬೆರೆಯದಂತೆ ತಡೆಯುವ, ತಂತಮ್ಮ ಉಷ್ಣಾಂಶವನ್ನು, ಸಾಂದ್ರತೆ



ಹಾಗೂ ಉಪ್ಪುರಸವನ್ನು ನೆಲೆನಿಲ್ಲಿಸುವ ಒಂದು ಅಡ್ಡಗೋಡೆಯಿದೆ ಎಂಬುದು.

ಇಂತಹ ದಿವ್ಯ ಅದ್ಭುತಗಳು 1400 ವರ್ಷಗಳ ಮೊದಲೇ ಕುರ್‌ಆನ್‌ನಲ್ಲಿ ಪ್ರಸ್ತಾಪಿಸಲ್ಪಟ್ಟಿವೆ.

## ಅದ್ವಿತೀಯತೆ:

ಕುರ್‌ಆನ್‌ನ ಸೌಂದರ್ಯ, ಭಾಷಾಸ್ಫುಟತೆ, ವೈಭವ, ವೈಚಾರಿಕತೆ, ಭವಿಷ್ಯ ನುಡಿಗಳು ಹಾಗೂ ಇತರ ವಿಷಯಗಳ ಪರಿಪೂರ್ಣತೆಯ ಮಾದರಿಯಲ್ಲಿ ಕುರ್‌ಆನ್‌ನಲ್ಲಿರುವಂತಹ ಒಂದು ಅಧ್ಯಾಯವನ್ನಾದರೂ ರಚಿಸಿ ತರಲು ಕುರ್‌ಆನ್ ಅವತೀರ್ಣವಾದ ಕಾಲದಿಂದ ಇಂದಿನವರೆಗೂ ಯಾವೊಬ್ಬ ಶಕ್ತಿಗೂ ಸಾಧ್ಯವಾಗಿಲ್ಲ.

***ನಾವು ನಮ್ಮ ದಾಸನ ಮೇಲೆ ಅವತೀರ್ಣಗೊಳಿಸಿದೇನಿದೆಯೋ ಅದರಲ್ಲಿ ನಿಮಗೆ ಏನಾದರೂ ಸಂದೇಹವಿದ್ದರೆ ಮತ್ತು ನೀವು ಸತ್ಯವಾದಿಗಳಾಗಿದ್ದರೆ ಆಗ ನೀವು ಅದರಂತಹ ಅಧ್ಯಾಯವನ್ನು ರಚಿಸಿತನ್ನಿರಿ ಮತ್ತು ನೀವು ಅಲ್ಲಾಹುವಿನ ಹೊರತು ನಿಮ್ಮ ಸಹಾಯಕರನ್ನು ಕರೆದುಕೊಳ್ಳಿರಿ."***

**(ಕುರ್‌ಆನ್ 2:23)**

ಈ ಸವಾಲಿನ ಮುಂದೆ ಪ್ರವಾದಿಯವರನ್ನು ತಿರಸ್ಕರಿಸಿದವರು ಕುರ್‌ಆನ್‌ನ ಭಾಷೆಯ ಮಹಾಪಟುಗಳಾಗಿದ್ದರೂ ಸಹ ಸೋಲೊಪ್ಪಿಕೊಂಡು ಶರಣಾಗಿಬಿಟ್ಟರು. ಪ್ರಸ್ತುತ ಸವಾಲು ಯಾವುದೇ ಪ್ರತಿಕ್ರಿಯೆ ಸಿಗದೆ ಇಂದಿನವರೆಗೂ ನೆಲೆನಿಂತಿದೆ ಎಂಬುದು ಗಮನಾರ್ಹ.



## ಯಾವುದೇ ವೈರುಧ್ಯವಿಲ್ಲ.

ಸಾಮಾನ್ಯವಾಗಿ ಜನರು ಬರೆಯುವಾಗ ಅಕ್ಷರ ತಪ್ಪು, ವ್ಯಾಕರಣ ತಪ್ಪು, ಪರಸ್ಪರ ವೈರುಧ್ಯಪೂರ್ಣ ವಾಕ್ಯಗಳು, ಅವಾಸ್ತವ ಸಂಗತಿಗಳು, ಮಾಹಿತಿಯ ಅಲಭ್ಯತೆ ಮತ್ತಿತರ ಪ್ರಮಾದಗಳು ಸಂಭವಿಸಲು ಸಾಧ್ಯತೆಯಿರುತ್ತವೆ.

ಕುರ್‌ಆನ್‌ನಲ್ಲಿ ಯಾವುದೇ ಕ್ಷೇತ್ರದಲ್ಲಿ, ಅದು ಜಲಚಕ್ರವನ್ನು ವಿವರಿಸುವಲ್ಲಾಗಲಿ, ಭ್ರೂಣ ಶಾಸ್ತ್ರ, ಜೀವಶಾಸ್ತ್ರ ಅಥವಾ ಕಾಸ್ಮೋಲಜಿಗಳ ವಿವರಣೆಗಳಲ್ಲಾಗಲಿ, ಚಾರಿತ್ರಿಕ ಸತ್ಯ ಅಥವಾ ಘಟನೆಗಳ ವಿವರಣೆಗಳಲ್ಲಾಗಲಿ, ಭವಿಷ್ಯ ನುಡಿಯ ವಿಷಯದಲ್ಲಾಗಲಿ ಯಾವುದೇ ವೈರುಧ್ಯವು ಕಂಡುಬಂದೇ ಇಲ್ಲ.

## ಪ್ರವಾದಿ ಮುಹಮ್ಮದ್ ಇದನ್ನು ರಚಿಸಿರಲು ಸಾಧ್ಯವೇ?

ಪ್ರವಾದಿ ಮುಹಮ್ಮದ್(ಸ)ರವರು ಅನಕ್ಷರಸ್ಥರಾಗಿದ್ದರೆಂದು ಚರಿತ್ರೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಅವರಿಗೆ ಓದುವುದಾಗಲಿ, ಬರೆಯುವುದಾಗಲಿ ಸಾಧ್ಯವಿರಲಿಲ್ಲ. ಪ್ರಸ್ತುತ ಅದ್ಭುತ ಗ್ರಂಥದ ಸಾಹಿತ್ಯಿಕ ಸೌಂದರ್ಯಕ್ಕೂ, ವೈಜ್ಞಾನಿಕ ಹಾಗೂ ಚಾರಿತ್ರಿಕ ನಿಖರತೆಗೂ ಕಾರಣವಾದ ವಿದ್ಯಾಭ್ಯಾಸವನ್ನು ಅವರು ಯಾವುದೇ ಕ್ಷೇತ್ರದಲ್ಲಿ ಪಡೆಯಲೂ ಇಲ್ಲ. ಇದರಲ್ಲಿರುವ ಪೂರ್ವ ಕಾಲದವರ ಹಾಗೂ ನಾಗರಿಕತೆಗಳ ಐತಿಹಾಸಿಕ

ವಿವರಗಳ ಸಂಕ್ಷಿಪ್ತ ವಿವರಣೆಯು ಯಾವುದೇ ಒಬ್ಬ ಮನುಷ್ಯನಿಂದ ರಚಿಸಲ್ಪಡುವುದಕ್ಕಿಂತಲೂ ಎಷ್ಟೋ ಉನ್ನತವಾಗಿದೆ.

> ***“ಮತ್ತು ಈ ಖುರ್‌ಆನ್ ಅಲ್ಲಾಹುವಿನ(ವಾಣಿಯ) ಹೊರತು (ಸ್ವಂತವಾಗಿ) ರಚಿಸಿ ತರಲಾಗುವಂತದ್ದಲ್ಲ.”***
> **(ಕುರ್‌ಆನ್ 10:37)**

**ಅವತೀರ್ಣದ ಉದ್ದೇಶ:**

- **ಏಕೈಕ ನೈಜ ಪ್ರಭುವಿನಲ್ಲಿ ವಿಶ್ವಾಸವಿರಿಸಲು...**

***“ನಿಮ್ಮೆಲ್ಲರ ಆರಾಧ್ಯನು ಏಕೈಕ ಆರಾಧ್ಯನು. ಅವನ ಹೊರತು ಇನ್ನಾವ ನೈಜ ಆರಾಧ್ಯನಿಲ್ಲ. ಅವನು ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವನು. “*** **(ಅಲ್‌ಕುರ್‌ಆನ್ 2:163)**

ಕುರ್‌ಆನ್‌ನಾದ್ಯಂತ ಪ್ರಸ್ತಾಪಿಸಲಾದ ಅತ್ಯಂತ ಮುಖ್ಯ ವಿಷಯವೆಂದರೆ ಏಕೈಕನೂ ನೈಜ ಆರಾಧ್ಯನೂ ಆದ ಪ್ರಭುವಿನ ಮೇಲೆ ವಿಶ್ವಾಸವಿಡುವುದಾಗಿದೆ. ಅವನು ತನಗೆ ಯಾವುದೇ ಭಾಗೀದಾರರಾಗಲಿ, ಪುತ್ರನಾಗಲಿ, ಸಮಾನರಾಗಲಿ, ತನ್ನ ಹೊರತು ಆರಾಧನೆಗೆ ಅರ್ಹರಾಗಲಿ ಯಾರೂ ಇಲ್ಲವೆಂದು ನಮಗೆ ತಿಳಿಸುತ್ತಿದ್ದಾನೆ. ಅವನಿಗೆ ಸಾದೃಶರಾಗಿ ಯಾರೂ ಇಲ್ಲ. ಅವನನ್ನು ಹೋಲುವವರೂ ಇಲ್ಲ. ಮಾನವ ಗುಣಗಳನ್ನೂ, ಮಿತಿಗಳನ್ನೂ ಆ ಸರ್ವಶಕ್ತನಿಗೆ ಕಲ್ಪಿಸಿಕೊಳ್ಳುವ ರೀತಿಯನ್ನು ಖುರ್‌ಆನ್ ತಿರಸ್ಕರಿಸುತ್ತದೆ.



- **ಸಕಲ ಮಿಥ್ಯ ದೇವರುಗಳನ್ನು ತಿರಸ್ಕರಿಸಲು...**

***“ಮತ್ತು ನೀವು ಅಲ್ಲಾಹುವಿನ ಆರಾಧನೆಯನ್ನು ಮಾಡಿರಿ ಮತ್ತು ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಿ...”*** **(ಅಲ್‌ಕುರ್‌ಆನ್ 4:36)**

ಅಲ್ಲಾಹುವೊಬ್ಬನೇ ಆರಾಧನೆಗೆ ಅರ್ಹನಾಗಿರುವಾಗ ಮಿಥ್ಯ ಆರಾಧ್ಯರು ಮತ್ತು ಮಿಥ್ಯ ದೇವರುಗಳು ತಿರಸ್ಕೃತವಾಗಲೇ ಬೇಕು. ಅಲ್ಲಾಹುವಿನ ಹೊರತಾದ ಯಾರಿಗೂ, ಯಾವ ಶಕ್ತಿಗೂ ನೈಜ ಆರಾಧ್ಯನ ಸ್ವಭಾವ ಗುಣಗಳನ್ನು ಕಲ್ಪಿಸುವುದನ್ನು ಸಹ ಕುರ್‌ಆನ್ ತಿರಸ್ಕರಿಸುತ್ತದೆ.

- **ಗತಕಾಲದ ಕಥೆಗಳನ್ನು ವಿವರಿಸಲು...**

ಕುರ್‌ಆನ್ ನೀತಿ ಪಾಠಗಳನ್ನು ಒಳಗೊಂಡಿರುವ ಹಲವು ಕಥೆಗಳ ಜೊತೆಗೆ ಪ್ರವಾದಿ ಆದಂ, ನೂಹ್, ಅಬ್ರಹಾಂ, ಯೇಸು ಮೋಶೆ ಮುಂತಾದ ಗತಕಾಲದ ಪ್ರವಾದಿಗಳ ಸತ್ಯ ವೃತ್ತಾಂತಗಳನ್ನು ವಿವರಿಸುತ್ತದೆ. ಅಲ್ಲಾಹು ಹೇಳುತ್ತಾನೆ:

***“ಅವರ ವೃತ್ತಾಂತಗಳಲ್ಲಿ ಬುದ್ಧಿಜೀವಿಗಳಿಗೆ ನೀತಿ ಪಾಠಗಳಿವೆ.”*** **(ಕುರ್‌ಆನ್ 12:111)**

- **ಅಂತಿಮ ತೀರ್ಪಿನ ದಿನವನ್ನು ನೆನಪಿಸಲು...**

ಪ್ರತಿಯೊಬ್ಬರೂ ಮರಣದ ರುಚಿ ಅನುಭವಿಸಲಿಕ್ಕಿದ್ದಾರೆ ಹಾಗೂ ಅವರು ತಮ್ಮ ಮಾತು ಮತ್ತು ಕೃತಿಗಳ ಬಗ್ಗೆ ವಿಚಾರಣೆಯನ್ನು ಎದುರಿಸಕ್ಕಿದ್ದಾರೆ ಎಂದು ಈ



ಆದರಣೀಯ ಗ್ರಂಥವು ಎಚ್ಚರಿಸುತ್ತದೆ. ***“ನಾವು ಪ್ರಳಯದಿನದಂದು ಮಧ್ಯದಲ್ಲಿ ನಿಖರವಾಗಿ ತೂಗುವಂತಹ ತಕ್ಕಡಿಯನ್ನು ಇರಿಸುವೆವು. ಇದು ಯಾರೊಂದಿಗೂ ಲವಲೇಶ ಅನ್ಯಾಯವನ್ನೂ ಮಾಡಲಾಗದಿರಲೆಂದಾಗಿದೆ...”*** **(ಅಲ್‌ಕುರ್‌ಆನ್ 21;47)**

- **ಉದ್ದೇಶಿತ ಜೀವನ ಮಾರ್ಗವನ್ನು ಪೂರ್ತೀಕರಿಸಲು...**

ಮುಖ್ಯವಾಗಿ ಖುರ್‌ಆನ್ ಕಲಿಸುವುದೇನೆಂದರೆ ಒಬ್ಬನ ಜೀವನದ ಅತಿ ಪ್ರಧಾನ ಉದ್ದೇಶವು ಏಕೈಕ ಅಲ್ಲಾಹುವನ್ನೇ ಆರಾಧಿಸುವುದಾಗಿರುತ್ತದೆ ಹಾಗೂ ಅವನು ತನಗೆ ನಿಶ್ಚಯಿಸಲಾದ ಕ್ರಮಪ್ರಕಾರದಲ್ಲೇ ಜೀವನವನ್ನು ರೂಪೀಕರಿಸುವುದಾಗಿರುತ್ತದೆ. ಅಲ್ಲಾಹು ಮೆಚ್ಚುವಂತಹ ಹಾಗೂ ಸಂತೃಪ್ತಿ ಹೊಂದುವಂತಹ ಮಾತು ಮತ್ತು ಕೃತಿಗಳು (ಖಾಸಗಿಯಾಗಿರಲಿ, ಬಹಿರಂಗವಾಗಿರಲಿ) ಒಳಗೊಂಡಿರುವುದೇ ಆರಾಧನೆಯಾಗಿದೆಯೆಂಬುದು ಇಸ್ಲಾಮಿನ ದೃಷ್ಟಿಕೋನವಾಗಿದೆ. ಆದ್ದರಿಂದ ಅಲ್ಲಾಹು ಆದೇಶಿಸುವುದನ್ನು ಚಾಚೂ ತಪ್ಪದೆ ಪಾಲಿಸುವ ಮೂಲಕ ಒಬ್ಬ ಮುಸ್ಲಿಮನು ತನ್ನ ಪ್ರಭುವನ್ನು ಆರಾಧಿಸುವನು ಹಾಗೂ ತನ್ನ ಜೀವನದ ಧ್ಯೇಯವನ್ನು ಪೂರ್ತೀಕರಿಸುವನು. ಖುರ್‌ಆನ್‌ನಲ್ಲಿ ಆರಾಧನೆಯ ಉದಾಹರಣೆಗಳು ಇಂತಿವೆ:

➢ ***<u>ನಮಾಝ್ ಮಾಡುವುದು</u>: “ಓ ಸತ್ಯವಿಶ್ವಾಸವಿರಿಸಿದವರೇ, ನೀವು ಬಾಗುವುದನ್ನು ಮತ್ತು***

ಸಾಷ್ಟಾಂಗವನ್ನು ಮಾಡಿರಿ ಮತ್ತು ನಿಮ್ಮ ಪಾಲಕಪ್ರಭುವಿನ ಆರಾಧನೆಯನ್ನು ಮಾಡಿರಿ ಹಾಗೂ ಒಳಿತನ್ನು ಮಾಡುತ್ತಿರಿ. ಇದು ನೀವು ಯಶಸ್ಸು ಪಡೆಯಲೆಂದಾಗಿದೆ." (ಕುರ್‌ಆನ್ 22:77)

- <u>ದಾನ ಧರ್ಮ ಮಾಡುವುದು:</u> "...ಹಾಗೂ ನೀವು ಅಲ್ಲಾಹುವಿನ ಮಾರ್ಗದಲ್ಲಿ ದಾನಧರ್ಮ ಮಾಡಿರಿ. ಅದು ನಿಮ್ಮ ಪಾಲಿಗೆ ಅತ್ಯುತ್ತಮವಾಗಿರುತ್ತದೆ ಮತ್ತು ಯಾರು ತನ್ನಲ್ಲಿನ ಅತಿಯಾಸೆಯಿಂದ ರಕ್ಷಿಸಲ್ಪಡುತ್ತಾನೋ ಅವನೇ ಯಶಸ್ಸು ಪಡೆದವನಾಗಿರುತ್ತಾನೆ." (ಕುರ್‌ಆನ್ 64: 16)
- <u>ಪ್ರಾಮಾಣಿಕನಾಗಿರುವುದು:</u> "ಮತ್ತು ನೀವು ಸತ್ಯವನ್ನು ಮಿಥ್ಯದೊಂದಿಗೆ ಕಲಬೆರಕೆ ಮಾಡುವುದಾಗಲಿ, ತಿಳಿದೂ ತಿಳಿದೂ ಸತ್ಯವನ್ನು ಮರೆಮಾಚುವುದಾಗಲಿ ಮಾಡದಿರಿ" (ಕುರ್‌ಆನ್ 2:42)
- <u>ಸಚ್ಚಾರಿತ್ರ್ಯವಂತನಾಗುವುದು:</u> "ಮುಸ್ಲಿಮ್ ಪುರುಷರಿಗೆ ಹೇಳು: ಅವರು ತಮ್ಮ ದೃಷ್ಟಿಗಳನ್ನು ತಗ್ಗಿಸಿಕೊಳ್ಳಲಿ ಮತ್ತು ತಮ್ಮ ಗುಹ್ಯಾಂಗಗಳನ್ನು ಸುರಕ್ಷಿತವಾಗಿರಿಸಲಿ...ಮುಸ್ಲಿಮ್‌ಸ್ತ್ರೀಯರಿಗೆ ಹೇಳು: ಅವರು ಸಹ ತಮ್ಮ ದೃಷ್ಟಿಗಳನ್ನು ತಗ್ಗಿಸಲಿ ಮತ್ತು ತಮ್ಮ ಶೀಲಕ್ಕೆ ಯಾವುದೇ ಭಂಗವುಂಟಾಗದಂತೆ ನೋಡಿಕೊಳ್ಳಲಿ..."(ಕುರ್‌ಆನ್ 24:30–31)
- ಕೃತಜ್ಞನಾಗಿರುವುದು: "ಅಲ್ಲಾಹು ನಿಮ್ಮ ತಾಯಂದಿರ ಉದರಗಳಿಂದ ನೀವೇನೂ ಅರಿಯದಂತಹ ಸ್ಥಿತಿಯಲ್ಲಿ ನಿಮ್ಮನ್ನು ಹೊರ ತಂದನು. ಅವನೇ ನಿಮ್ಮ ಶ್ರವಣವನ್ನೂ, ದೃಷ್ಟಿಗಳನ್ನೂ, ಹೃದಯಗಳನ್ನೂ ಮಾಡಿಕೊಟ್ಟವನು. ಇದು ನೀವು ಕೃತಜ್ಞರಾಗಲೆಂದಾಗಿದೆ." (ಕುರ್‌ಆನ್ 16:78)
- ನ್ಯಾಯವಂತನಾಗುವುದು: "ಓ ಸತ್ಯವಿಶ್ವಾಸಿಗಳೇ, ನ್ಯಾಯ ಮತ್ತು ನೀತಿಯಲ್ಲಿ ಸುದೃಢತೆಯಿಂದ ನೆಲೆನಿಲ್ಲುವವರೂ, ಅಲ್ಲಾಹುವಿನ ಸಂತೃಪ್ತಿಗಾಗಿ ಸತ್ಯವಾದ ಸಾಕ್ಷ್ಯವಹಿಸುವವರೂ ಆಗಿಬಿಡಿರಿ. ಅದು ಸ್ವತಃ ನಿಮಗೆ, ಅಥವಾ ನಿಮ್ಮ ಮಾತಾಪಿತರಿಗೆ ಅಥವಾ ನಿಕಟ ಸಂಬಂಧಿಕರಿಗೆ ವಿರುದ್ಧವಾಗಿದ್ದರೂ ಸರಿಯೇ. ಆ ವ್ಯಕ್ತಿಯು ಧನಿಕನಾಗಿರಲಿ ಅಥವಾ ದರಿದ್ರನಾಗಿರಲಿ.. .(ಕುರ್‌ಆನ್ 4:135)
- ಸಹನಾಶೀಲನಾಗುವುದು: "ಮತ್ತು ಸಹನೆವಹಿಸುತ್ತಿರಿ. ನಿಶ್ಚಯವಾಗಿಯೂ ಅಲ್ಲಾಹು ಒಳಿತಿನ ಪಾಲಕರ ಪ್ರತಿಫಲವನ್ನು ವ್ಯರ್ಥಗೊಳಿಸುವುದಿಲ್ಲ." (ಕುರ್‌ಆನ್ 11:115)
- ಒಳಿತು ಮಾಡುವುದು: "ಅಲ್ಲಾಹುವಿನ ವಾಗ್ದಾನವೇನೆಂದರೆ ಯಾರು ಸತ್ಯವಿಶ್ವಾಸವಿಟ್ಟರೋ ಮತ್ತು ಸತ್ಕರ್ಮಗೈದರೋ ಅವರಿಗೆ ವಿಶಾಲವಾದ ಪಾಪವಿಮೋಚನೆ ಹಾಗೂ ಅತಿ ಮಹಾ ಪ್ರತಿಫಲವಿದೆಯೆಂದಾಗಿದೆ." (ಕುರ್‌ಆನ್ 5:9)

## ಸಮಾಪ್ತಿ

ಒಟ್ಟಿನಲ್ಲಿ ಖುರ್‌ಆನ್ ಮಾನವಕುಲಕ್ಕೆ ಹೇಗೆ ಏಕೈಕ ನೈಜ ಪ್ರಭುವನ್ನು ಆರಾಧಿಸಬೇಕೆಂದು ತಿಳಿಸಿಕೊಡುತ್ತದೆ. ಅದೇ ರೀತಿ ಅವರ ಜೀವನದ ನೈಜ ಉದ್ದೇಶವನ್ನು ಈಡೇರಿಸುವುದು ಹಾಗೂ ಈ ಲೋಕದಲ್ಲೂ, ಪರಲೋಕದಲ್ಲೂ ಯಶಸ್ಸನ್ನು ಪಡೆಯುವುದನ್ನು ಈ ಮೂಲಕ ತೋರಿಸಿಕೊಡುತ್ತದೆ.

"ಜನರಿಗಾಗಿ ನಾವು ಈ ಗ್ರಂಥವನ್ನು ಸತ್ಯದೊಂದಿಗೆ ತಮ್ಮೆಡೆಗೆ ಅವತೀರ್ಣಗೊಳಿಸಿರುತ್ತೇವೆ. ಇನ್ನು ಯಾರು ಸನ್ಮಾರ್ಗ ಪಡೆಯುತ್ತಾನೋ ಆಗ ಸ್ವತಃ ಅವನಿಗೇ ಲಾಭವುಂಟಾಗಲಿದೆ ಮತ್ತು ಯಾರು ಮಾರ್ಗಭ್ರಷ್ಟನಾಗುತ್ತಾನೋ ಆಗ ಅವನ ಮಾರ್ಗಭ್ರಷ್ಟತೆಯು (ವಿಪತ್ತು) ಸ್ವತಃ ಅವನ ಮೇಲೆಯೇ ಇರುವುದು. ತಾವು ಅವರ ಮೇಲ್ವಿಚಾರಕರಲ್ಲ." (ಅಲ್‌ಕುರ್‌ಆನ್ 39:41)

ಇನ್ನು ಈ ಮಹಾನ್ ಗ್ರಂಥವನ್ನು ಕನಿಷ್ಠಪಕ್ಷ ಓದುವುದಕ್ಕಾದರೂ ಮನಸ್ಸು ಮಾಡಬಲ್ಲಿರಾ?

ಪ್ರಕಟಣೆ:
ಕರ್ನಾಟಕ ಸಲಫಿ ಅಸೋಸಿಯೇಶನ್
ರಿಯಾದ್, ಸೌದಿ ಅರೇಬಿಯ
0544387673 / 0507937093
Email: ksariyadh@ymail.com